ಕವಿತೆ

# ಕಾಲ



ದಾದಾಪೀರ್ ಜೈಮನ್

ಕಲೆ: ರೂಪಶ್ರೀ ಕಲ್ಲಿಗನೂರು



ಅವರು ಹೋದರು
ಅಮ್ಮ ಅದುರುತ್ತಾ ಎಳವೆಯ ನನ್ನ ಕೈ ಹಿಡಿದು
ದುಮುದುಮು ನಡೆವಾಗ
ನಡುಗುವ ಅವಳ ಬೆರಳ ಕಂಪನದ ಕಾರಣ ತಿಳಿದಿರಲಿಲ್ಲ
ಹೋದವರನ್ನು ನೋಡಬೇಕಾದರೂ ಹೇಗೆ?

ಗಳಗಳ ಅಳು, ಉಕ್ಕಿ ಸರಿವ ಅಲೆಗಳಂತೆ ಗಂಟಲಸೆರೆ
ದುಃಖ ಬೀದಿಗೆ ಬಂದರೂ ಘನತೆಕುಂದದ ಜಾಗ
ಹೋದವರು
ಉಸಿರಿನ ಆಲುಗಾಟವನ್ನೂ ನಿಲ್ಲಿಸಿ ನಿದ್ದೆ ಹೋಗಿದ್ದರು

ಆ ಕ್ಷಣ
ಕಂಡವು
ಎಳವೆಯ ಕಾಲುಗಳಿಗಿಂತ ಸಣಕಲಾದ ಅವರ ಕಾಲು
ಯಾರೋ ಪಿಸುಗುಟ್ಟಿದರು
ಅವರ ಕಾಲ ಮುಗಿಯಿತು
ವಿಚಿತ್ರವಾದ ನಡುಕ
ಕಂಪನ
ಕಾಲು ಮತ್ತು ಕಾಲ
ಒಂದರೊಳಗೊಂದು ಬೆರೆತ ಹಾಗೆ
ಕಾಲು ನಿಂತಾಗ ಕಾಲವೇ
ಯಾವುದು ಮುಗಿದಾಗ ಯಾವುದು ಉಳಿಯುತ್ತದೆ?

ಕಾಲ ಮೈ ಹುಟ್ಟುತ್ತದೆ
ಯೌವನದಲ್ಲಿ ಸೊಕ್ಕುತ್ತದೆ
ಮುಪ್ಪಿನಲ್ಲಿ ಸುಕ್ಕುತ್ತದೆ
ಪ್ರತಿ ಗೆರೆಯೂ ಅಲೆ ಅಲೆಯಾಗಿ ತೇಲುತ್ತದೆ
ಕಳೆದಂತೆಲ್ಲ ಕಸುವು ಕುಗ್ಗಿ ಹಿಗ್ಗಾಗುತ್ತದೆ
ಅವರು ಹೇಳುತ್ತಾರೆ
ಎಲ್ಲರ ಕಾಲ ಬೇರೆ
ಎಲ್ಲದಕು ಕೂಡಿಬರಬೇಕು ಕಾಲ
ನನ್ನ ಕೈಗಳೀಗ
ಅನಾಮತ್ತಾಗಿ ಮುಟ್ಟಿ ತಟ್ಟಿ
ಕಾಲಳತೆಯ
ನೀವಿಕೊಳ್ಳುತ್ತವೆ